ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್ತಿನ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE: 21/02/2020

# ಐದು ಉಪಮುಖ್ಯಮಂತ್ರಿ ಮಾಡ್ತೀರಿ

21/02/2020

**ವಿಧಾನಪರಿಷತ್:** ಇಬ್ಬರು, ಮೂವರು ಉಪಮುಖ್ಯಮಂತ್ರಿ ಮಾಡಿದ್ದು ನೀವೇ. ಈಗ ಆಂಧ್ರಪ್ರದೇಶ ಮಾದರಿಯಲ್ಲಿ ಐದು ಡಿಸಿಎಂ ಮಾಡುವುದು ಶತಸಿದ್ಧ. ಯಡಿಯೂರಪ್ಪ ಮಾಡ್ತಾರೆ, ನೋಡಿ, ನಾನು ಹೇಳಿದ್ದು ಸುಳ್ಳಾದರೆ ಹೇಳಿ ಎಂದು ಬಸವರಾಜ ಹೊರಟ್ಟಿ ಹೇಳಿದರು.

ರಾಜ್ಯಪಾಲರ ಭಾಷಣದ ಬಳಿಕ ಮಾತನಾಡಿ, ಅತಿಯಾದ ಪ್ರೀತಿ, ನಂಬಿಕೆ ಒಳ್ಳೆಯದಲ್ಲ, ನಮ್ಮವರನ್ನು ಸಚಿವರನ್ನಾಗಿ ಮಾಡಿ ಎಂದು ಸ್ವಾಮೀಜಿ ಒಬ್ಬರು ಹೇಳುತ್ತಾರೆ. ಈ ರೀತಿ ಸ್ವಾಮೀಜಿಗಳೆಲ್ಲ ವಿಧಾನಸೌಧಕ್ಕೆ ಬರಲಾರಂಭಿಸಿದರೆ, ಪ್ರಭಾವ ಬಳಸಿದರೆ, ನಾವು ರಾಜಕಾರಣಿಗಳು ಮಠಕ್ಕೆ ಹೋಗಬೇಕಾಗುತ್ತದೆ. 13 ಜಿಲ್ಲೆಗೆ ಉಸ್ತುವಾರಿ ಸಚಿವರಿಲ್ಲ. 28 ಸಚಿವರಿದ್ದೀರಿ, ಖಾಲಿ ಇದ್ದದ್ದೇಕೆ. ಇಂದು ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದರೆ ಬೆಳಗಾವಿ ಮುಖ್ಯ ಕಾರಣ. ಅಲ್ಲಿ ನಮ್ಮ ಒಬ್ಬ ಹೀರೋ ಇದ್ದಾನೆ ಎಂದು ಹೇಳಿದರು.

ಮಧ್ಯ ಪ್ರವೇಶ ಮಾಡಿದ ರವಿಕುಮಾರ್, ಬಸವರಾಜ ಹೊರಟ್ಟಿ ಅನುಭವವನ್ನು ಜೆಡಿಎಸ್ ಸಂಪೂರ್ಣವಾಗಿ ಕಡೆಗಣಿಸಿತು ಎಂದಾಗ ತೀವ್ರ ಆಕ್ರೋಶ ಜೆಡಿಎಸ್ ಸದಸ್ಯರಿಂದ ವ್ಯಕ್ತವಾಯಿತು. ಬಿಜೆಪಿಯವರು ನನ್ನ ಬಗ್ಗೆ ಅಪಾರ ಕಾಳಜಿ ವ್ಯಕ್ತಪಡಿಸಿದ್ದಾರೆ. ಆದರೆ ನಾನು ನನ್ನ ರಾಜಕೀಯ ಜೀವನವನ್ನು ಇದೇ ಪಕ್ಷದಲ್ಲಿ ಮುಗಿಸುತ್ತೇನೆ. ಬೇರೆ ಕಡೆ ಹೋಗಲು ನನ್ನ ತತ್ವ ಒಪ್ಪಲ್ಲ. ಬಿಜೆಪಿ ನಿಲುವು ನನಗೆ ಇಷ್ಟ ಆಗಲ್ಲ. ಇಂದು ಕೂಡ ಮೂರು ಡಿಸಿಎಂ ಮಾಡಿ ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ ಅಂತ ಆಗಿದೆ. ಕೋಟ್ಯಂತರ ರು. ನಷ್ಟ ಮಾಡುತ್ತಿದ್ದೀರಿ. ಅಧಿಕಾರ ಸಿಕ್ಕಿದೆ ಮಾಡುತ್ತಿದ್ದೀರಿ ಮಾಡಿ ಎಂದರು.

ಮೇಲ್ಮನೆ ಇತರರಿಗೆ ಮಾದರಿ ಆಗಬೇಕು. ಎಂತೆಂಥ ಗಣ್ಯರು ಇಲ್ಲಿ ಬಂದರು. ಅವರ ಗೌರವ ಕಾಯಬೇಕಾಗಿದೆ ಎಂದರು. ಮಾತಿಗಿಳಿದ ಸಚಿವ ಡಾ. ಸುಧಾಕರ್, ಇಂದು ಎರಡೂ ಮನೆಗಳೂ ತಮ್ಮ ಗೌರವ ಕಳೆದುಕೊಂಡಿವೆ. ಗಂಭೀರ ಚರ್ಚೆ ಆಗುತ್ತಿಲ್ಲ. ಯಾವ ರೀತಿ ಚರ್ಚೆ ಆಗಬೇಕು, ಮೌಲ್ಯಾಧಾರಿತ ರಾಜಕೀಯ ವ್ಯವಸ್ಥೆ ಬರಬೇಕು ಎಂದರು. ಆದಕ್ಕೆ ಪ್ರತಿಪಕ್ಷ ಸದಸ್ಯರು ನಿಮ್ಮಲ್ಲಿ ಮೌಲ್ಯ ಇದೆಯೇ ಎಂದು ತರಾಟೆಗೆ ತೆಗೆದುಕೊಂಡರು. ಪರ ವಿರೋಧ ವಾಗ್ವಾದ ನಡೆಯಿತು. ಕೆಲಕಾಲ ಗೊಂದಲದ ವಾತಾವರಣ ಏರ್ಪಟ್ಟಿತು.



## ಮಾರ್ಚ್ 2ಕ್ಕೆ ಮುಂದೂಡಿಕೆ

**ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಸದನದ ಕಲಾಪವನ್ನು ಮಾರ್ಚ್ 2ರಂದು ಬೆಳಗ್ಗೆ 11ಗಂಟೆಗೆ ಮುಂದೂಡಿದರು. ಅಂದಿನಿಂದ ಸಂವಿಧಾನದ ಮೇಲಿನ ಚರ್ಚೆ ಮುಂದಿನ ಮೂರು ದಿನಗಳ ಕಾಲ ನಡೆಯಲಿದೆ.**

ಸಚಿವ ಸೋಮಣ್ಣ ಕೂಡ ಸದನದ ಗೌರವ ಹೆಚ್ಚಿಸಬೇಕು. ಎರಡು ಸಾರಿ ಆಯ್ಕೆಯಾಗಿದ್ದೆ, ಇದರ ಗೌರವದ ಅರಿವಿದೆ. ಈ ಮನೆ ಈ ಮನೆಯೇ, ಆ ಮನೆ ಆ ಮನೆಯೇ. ಎರಡೂ ಕಡೆ ಚರ್ಚೆ ಬೇರೆ. ಇಲ್ಲಿನ ಚರ್ಚೆ ವಿಮರ್ಶಾತ್ಮಕ ವಾಗಿರುತ್ತದೆ. ಉತ್ತಮ ಚರ್ಚೆ ಆಗುತ್ತೆ ಮುಂದುವರಿಯಲಿ ಎಂದರು.

ಮಾತು ಮುಂದುವರಿಸಿದ ಹೊರಟ್ಟಿ, ವಿಧಾನ ಪರಿಷತ್ ಗೌರವದ ವಿಚಾರವಾಗಿ ವಿವರಣೆ ನೀಡಿದರು. ರಾಜ್ಯದಲ್ಲಿ ಸರಕಾರ ಸುಭದ್ರವಾಗಿದೆ. ಅಭಿವೃದ್ಧಿಯತ್ತ ಗಮನ ಹರಿಸಿ, ರಾಜ್ಯದಲ್ಲಿ ಹಲವು ಸಮಸ್ಯೆ ಇದ್ದು, ತುರ್ತಾಗಿ ಆಗಬೇಕಾದ ಕೆಲಸಕ್ಕೆ ಗಮನ ಕೊಡಿ. ರೈತರ ಬಗ್ಗೆ ಗಮನ ಹರಿಸಿ ಎಂದರು.